ಪೊಲೀಸ್ ಮಹಾ ನಿರ್ದೇಶಕರ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು
ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ
ಪಡೆಯ ನಿರ್ದೇಶನಾಲಯ
ನಂ.1 ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು-560 042

ದೂರವಾಣಿ : 080 25570733
22971501
22971507

ಸಂಖ್ಯೆ:ಜಿಬಿಸಿ(2)3425/2024 ದಿನಾಂಕ:06-03-20255
E-Office Com No.49145

ಗೆ,

ಕಾರ್ಯದರ್ಶಿ,
ಮೆ|| ಅಮೃತಾಯ ಟ್ರಸ್ಟ್
ನಂ.37, ಮೊದಲನೇ ಮುಖ್ಯ ರಸ್ತೆ,
ಆರ್‌ಪಿಸಿ ಬಡಾವಣೆ,
ಬೆಂಗಳೂರು-560040.

ಮಾನ್ಯರೆ,

ವಿಷಯ: ಬೆಂಗಳೂರು ಉತ್ತರ, ಜಾಲ ಹೋಬಳಿ, ಕತ್ತಿಗನಹಳ್ಳಿ, ನಂ.58/3 ಇಲ್ಲಿ ನಿರ್ಮಿಸಿರುವ ಮೇ|| ಅಮೃತಾಯ ಸೆಂಟ್ರಲ್ ಸ್ಕೂಲ್ ಶೈಕ್ಷಣಿಕ ಕಟ್ಟಡಕ್ಕೆ ಸಮಾಪನಪತ್ರ ನೀಡುವ ಬಗ್ಗೆ.

ಉಲ್ಲೇಖ:1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂ. ಜಿಬಿಸಿ(2)3425/2024 ದಿನಾಂಕ:24-01-2025.
2)ನಿಮ್ಮ ಪತ್ರ ದಿನಾಂಕ:-28-01-2025.

<<<<<<<>>>>>>>

ಬೆಂಗಳೂರು ಉತ್ತರ, ಜಾಲ ಹೋಬಳಿ, ಕಟ್ಟಿಗಿನಹಳ್ಳಿ, ನಂ.58/3 ಇಲ್ಲಿ ನಿರ್ಮಿಸಿರುವ 20.00 ಮೀಟರ್ ಎತ್ತರದ ನೆಲಹಂತ ಮತ್ತು 04 ಮೇಲಂತಸ್ತುಗಳನು ಹೊಂದಿರುವ ಮೇ|| ಅಮೃತಾಯ ಸೆಂಟ್ರಲ್ ಸ್ಕೂಲ್ ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ:24-01-2025 ರಂದು ನಿಮ್ಮ ಕೋರಿಕೆಯಂತೆ ಸಲಹಾ ಪತ್ರ ನೀಡಲಾಗಿದೆ.

ಉಲ್ಲೇಖ (2)ರ ನಿಮ್ಮ ಪತ್ರದಲ್ಲಿ, ಸದರಿ ಶೈಕ್ಷಣಿಕ ಕಟ್ಟಡದಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಸಮಾಪನ ಪತ್ರ ನೀಡುವಂತೆ ಕೋರಿರುವಿರಿ.

ನಿಮ್ಮ ಕೋರಿಕೆಯಂತೆ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಪೀಣ್ಯ ಅಗ್ನಿಶಾಮಕ ಠಾಣೆ, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ರವರು ದಿನಾಂಕ:05-02-2025 ರಂದು ಬೆಂಗಳೂರು ಉತ್ತರ, ಜಾಲ ಹೋಬಳಿ, ಕಟ್ಟಿಗಿನೆಹಳ್ಳಿ, ನಂ.58/3 ಇಲ್ಲಿ ನಿರ್ಮಿಸಿರುವ ಶೈಕ್ಷಣಿಕ ಕಟ್ಟಡವನ್ನು ಪರಿವೀಕ್ಷಣೆ ಮಾಡಿ, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ, ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನು ಶೈಕ್ಷಣಿಕ ಕಟ್ಟಡದಲ್ಲೆ ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ಹಾಗೂ ಸದರಿ ಕಟ್ಟಡದಲ್ಲಿನ ನೌಕರರು/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿ ಇರುವುದಾಗಿ ಹಾಗೂ ಸದರಿ ಕಟ್ಟಡದ ಸಮಾಪನ ಪತ್ರ ತರುವಾಯ ಅದರಲ್ಲಿನ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ, ಬೆಂಗಳೂರು ಉತ್ತರ, ಜಾಲ ಹೋಬಳಿ, ಕಟ್ಟಿಗಿನಹಳ್ಳಿ, ನಂ.58/3 ಇಲ್ಲಿ ನಿರ್ಮಿಸಿರುವ 20.00 ಮೀಟರ್ ಎತ್ತರದ ನೆಲಹಂತ ಮತ್ತು 04 ಮೇಲಂತಸ್ತುಗಳನ್ನು ಹೊಂದಿರುವ ಮೇ|| ಅಮೃತಾಯ ಸೆಂಟ್ರಲ್

S. Deepa
PRINCIPAL
AMRUTHAYA CENTRAL SCHOOL
Survey No. 58/3, Kattigenahalli,
Jala-Hobli, Bengaluru North-560064

SECRETARY
AMRUTHAYA CENTRAL SCHOOL
Survey No. 58/3, Kattigenahalli,
Jala-Hobli, Bengaluru North-560064

ಸ್ಕೂಲ್ ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂಖ್ಯೆ ಜಿಬಿಸಿ(2)3425/2024 ದಿನಾಂಕ:24-01-2025 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು. ಹಾಗೂ ನಿಮ್ಮ ದಿನಾಂಕ:25-02-2025 ರ ಮುಚ್ಚಳಿಕೆ ಪತ್ರದಲ್ಲಿ ಒಪ್ಪಿರುವಂತೆ, ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಹಾಗೂ ಕಟ್ಟಡದಲ್ಲಿನ ಶೇಕಡಾ 40% ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡಮಿಯಲ್ಲಿ ಸೂಕ್ತ ತರಬೇತಿಯನ್ನು 03 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿನ ಮೇಲೆ ಸಮಾಪನ ವರದಿ ಪ್ರಮಾಣ ಪತ್ರವನ್ನು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ನೀಡಲಾಗಿದೆ.

ಈ ಸಮಾಪನ ಪ್ರಮಾಣ ಪತ್ರವು ಜಾರಿಯಾದ ದಿನಾಂಕದಿಂದ ಮುಂದಿನ ಎರಡು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಸಮಾಪನ ಪ್ರಮಾಣ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿತಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನನ್ವಯ ಸದರಿ ಕಟ್ಟಡದ ಸುತ್ತ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಯಾವುದೇ ಹೆಚ್ಚುವರಿ ರಚನೆಗಳನ್ನು ನಿರ್ಮಾಣ ಮಾಡಿದರೆ, ಅಥವಾ ಯಾವುದೇ ರೀತಿಯ ಖಾಯಂ/ತಾತ್ಕಾಲಿಕ ಅಡಚಣೆಗಳನ್ನು ಉಂಟು ಮಾಡಿದರೆ, ಈ 'ಸಮಾಪನ' ಪ್ರಮಾಣ ಪತ್ರವು ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಡಿಜಿಪಿ & ಡಿಜಿ ರವರಿಂದ

ಕರಡು ಅನುಮೋದಿಸಲ್ಪಟ್ಟಿದೆ

Digitally signed by
T N SHIVASHANKARA
Date: 06-03-2025
18:21:38

(ಟಿ.ಎನ್.ಶಿವಶಂಕರ)
ನಿರ್ದೇಶಕರು
ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
ರವರ ಪರವಾಗಿ

ಪ್ರತಿ:ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಉತ್ತರ ವಲಯ.

S. Deepa
PRINCIPAL
AMRUTHAYA CENTRAL SCHOOL
Survey No. 58/3, Kattigenahalli,
Jala-Hobli, Bengaluru North-560064

SECRETARY
AMRUTHAYA CENTRAL SCHOOL
Survey No. 58/3, Kattigenahalli,
Jala-Hobli, Bengaluru North-560064